## ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:27-03-2021 ರ ನಡವಳಿಗಳು

**ವಿಷಯದ ಸಂಖ್ಯೆ:955/2020-21**

**ಪ್ರಸ್ತಾವನೆ:**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 2020-21ನೇ ಸಾಲಿನ ಪರಿಷ್ಕೃತ ಅಂದಾಜು ಮತ್ತು 2021-22ನೇ ಸಾಲಿನ ಕರಡು ಆಯವ್ಯಯದಲ್ಲಿ ರೂ.9291.33 ಕೋಟಿ ಸ್ವೀಕೃತಿ ಮತ್ತು ರೂ.9286.80 ಕೋಟಿ ವೆಚ್ಚವನ್ನು ಅಂದಾಜಿಸಿದ್ದು, ರೂ.4.53 ಕೋಟಿ ಅಂತಿಮ ಶಿಲ್ಕು ನಿರೀಕ್ಷಿಸಿ ಆಯವ್ಯಯ ತಯಾರಿಸಲಾಗಿದ್ದು, ಕರಡು ಆಯವ್ಯಯದ ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮತ್ತು ಪಾಲಿಕೆ ಕೌನ್ಸಿಲ್ ಸಭೆಯ ಮುಂದೆ ಟಿಪ್ಪಣಿಯನ್ನು ಮಂಡಿಸಲಾಗಿದೆ.

ಮುಂದುವರೆದು, ಪಾಲಿಕೆ ಅನುಮೋದಿತ 2021-22ನೇ ಸಾಲಿನ ಆಯವ್ಯಯ ಅಂದಾಜುಗಳಿಗೆ ಸರ್ಕಾರದ ಅನುಮೋದನೆ ಪಡೆಯಬೇಕಾಗಿರುವ ಹಿನ್ನೆಲೆಯಲ್ಲಿ ಸರ್ಕಾರದ ಅನುಮೋದನೆ ನಿರೀಕ್ಷಿಸಿ ಪಾಲಿಕೆಯ ಅವಶ್ಯಕ ವೆಚ್ಚಗಳಾದ ವೇತನ, ಪಿಂಚಣಿ, ನಿರ್ವಹಣೆ, ಕಾಮಗಾರಿ ಬಾಕಿ ಬಿಲ್ಲುಗಳು ಮತ್ತು ಇತರೆ ಅವಶ್ಯಕ ಬಿಲ್ಲುಗಳ ಪಾವತಿಗೆ ಒಟ್ಟಾರೆ ಆಯವ್ಯಯದ ಶೇಕಡ 30 ರಷ್ಟು ಅನುದಾನದ ವೆಚ್ಚವನ್ನು ಭರಿಸುವ ಸಂಬಂಧ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮತ್ತು ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ಸೂಕ್ತ ತೀರ್ಮಾನಕ್ಕಾಗಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:25-03-2021 ರ ಟಿಪ್ಪಣಿ.

**ತೀರ್ಮಾನ:** **ಆಯುಕ್ತರವರ ದಿನಾಂಕ:25-03-2021 ರ ಟಿಪ್ಪಣಿಯನ್ನು ಒಪ್ಪಿದೆ.**

(ಗೌರವ ಗುಪ್ತ)
ಆಡಳಿತಗಾರರು

# ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:27-03-2021 ರ ನಡವಳಿಗಳು

**ವಿಷಯದ ಸಂಖ್ಯೆ:954/2020-21**

**ಪ್ರಸ್ತಾವನೆ:**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 2021-22ನೇ ಸಾಲಿನ ಆಯವ್ಯಯ ಅಂದಾಜುಗಳನ್ನು ತಯಾರಿಸಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮತ್ತು ಕೌನ್ಸಿಲ್ ಸಭೆಯ ಮುಂದೆ ಅನುಮೋದನೆಗಾಗಿ ಮಂಡಿಸಬೇಕಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಪಾಲಿಕೆಯ ಎಲ್ಲಾ ಇಲಾಖೆಗಳಿಂದ ಪಡೆಯಲಾದ ಮಾಹಿತಿಗಳ ಅನ್ವಯ 2020-21ನೇ ಸಾಲಿನ ಪರಿಷ್ಕೃತ ಆಯವ್ಯಯ ಮತ್ತು 2021-22ನೇ ಸಾಲಿನ ಆಯವ್ಯಯ ಅಂದಾಜುಗಳನ್ನು ಆದಾಯ ಮತ್ತು ವೆಚ್ಚಗಳ ಲೆಕ್ಕಶೀರ್ಷಿಕೆಗಳೊಂದಿಗೆ ಕ್ರೋಢೀಕರಿಸಿ ತಯಾರಿಸಲಾಗಿದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಿವಿಧ ಕಛೇರಿ/ವಿಭಾಗಗಳು ಒದಗಿಸಲಾದ ಮಾಹಿತಿ ಮತ್ತು ಬೇಡಿಕೆಯ ಅನುಸಾರ ಕ್ರೋಢೀಕರಿಸಿರುವ ವಿವರಗಳು ಕೆಳಕಂಡಂತಿದೆ.

1. **ಕಾಮಗಾರಿಗಳ ವೆಚ್ಚದ (ಪಾಲಿಕೆ ಮತ್ತು ಸರ್ಕಾರದ ಅನುದಾನ) ಹಾಲಿ ಇರುವ ಹೊಣೆಗಾರಿಕೆ ವಿವರಗಳು.:**

**ರೂ.ಕೋಟಿಗಳಲ್ಲಿ**

| ಕ್ರ.ಸ. | ವಿವರಗಳು | ಕೇಂದ್ರ ಸರ್ಕಾರದ ಅನುದಾನ | ರಾಜ್ಯ ಸರ್ಕಾರದ ಅನುದಾನ | ಬಿಬಿಎಂಪಿ ಅನುದಾನ | ಒಟ್ಟು ಮೊತ್ತ |
|---|---|---|---|---|---|
| 1 | ಬಾಕಿ ಇರುವ ಬಿಲ್ಲುಗಳ ವಿವರಗಳು | 102.88 | 1658.19 | 3108.88 | 4869.95 |
| 2 | ಮುಂದುವರೆದ/ಪ್ರಗತಿಯಲ್ಲಿರುವ ಕಾಮಗಾರಿಗಳ ವಿವರಗಳು | 151.45 | 2479.40 | 1740.00 | 4370.85 |
| 3 | ಕಾರ್ಯಾದೇಶ ನೀಡಲಾಗಿದ್ದು, ಪ್ರಾರಂಭವಾಗ ಬೇಕಾಗಿರುವ ಕಾಮಗಾರಿಗಳ ಮೊತ್ತ | 192.99 | 1621.82 | 1699.15 | 3513.96 |
| 4 | ಕಾಮಗಾರಿ ಸಂಖ್ಯೆ ನೀಡಲಾಗಿದ್ದು, ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿರುವ ಕಾಮಗಾರಿಗಳ ಮೊತ್ತ | 183.05 | 2350.65 | 3378.77 | 5912.47 |
| | **ಒಟ್ಟು ಕಾಮಗಾರಿಗಳ ಮೊತ್ತ** | **630.37** | **8110.06** | **9926.80** | **18667.23** |

2. **ಕಾಮಗಾರಿಯೇತರ ವೆಚ್ಚಗಳ ವಿವರಗಳು:**

[ರೂ.ಕೋಟಿಗಳಲ್ಲಿ]

| ಕ್ರ.ಸ. | ವಿವರಗಳು | ಮೊತ್ತ |
|---|---|---|
| 1 | ಕೌನ್ಸಿಲ್, ಆಡಳಿತಾತ್ಮಕ ವೆಚ್ಚಗಳು, ವೇತನ, ಪಿಂಚಣಿ | 1518.00 |
| 2 | ಬ್ಯಾಂಕ್ ಮತ್ತು ಹಣಕಾಸು ಸಂಸ್ಥೆಗಳ ಸಾಲ ಮರುಪಾವತಿ | 297.00 |

| | | |
|---|---|---|
| 3 | ತೋಟಗಾರಿಕೆ ವೆಚ್ಚಗಳು | 197.00 |
| 4 | ನಗರ ಅರಣ್ಯೀಕರಣ ವೆಚ್ಚಗಳು | 37.00 |
| 5 | ಆರೋಗ್ಯ – ಸಾಮಾನ್ಯ ವೆಚ್ಚಗಳು | 183.00 |
| 6 | ಆರೋಗ್ಯ – ವೈದ್ಯಕೀಯ ವೆಚ್ಚಗಳು | 68.00 |
| 7 | ಘನತ್ಯಾಜ್ಯ ನಿರ್ವಹಣೆ ವೆಚ್ಚಗಳು | 664.00 |
| 8 | ಶಿಕ್ಷಣ ವೆಚ್ಚಗಳು | 35.00 |
| 9 | ಕಲ್ಯಾಣ ಕಾರ್ಯಕ್ರಮ ವೆಚ್ಚಗಳು | 304.00 |
| 10 | ಕರಗಳ ಮರುಪಾವತಿ ವೆಚ್ಚಗಳು | 302.00 |
| | **ಒಟ್ಟು ಮೊತ್ತ** | **3605.00** |
| | **ಒಟ್ಟಾರೆ ಬೇಡಿಕೆ ಮೊತ್ತ** | **22,272.23** |

ಮೇಲ್ಕಂಡ ಅಂಶಗಳನ್ನು ಅವಲೋಕಿಸಿ, ಪಾಲಿಕೆ ಸಂಪನ್ಮೂಲದ ಕ್ರೋಢೀಕರಣದ ಮಿತಿಯನ್ನು ಹಾಗೂ ಪ್ರಸ್ತುತ ಪಾಲಿಕೆಯ ಆರ್ಥಿಕ ಪರಿಸ್ಥಿತಿಯನ್ನು ಪರಿಗಣಿಸಿ, ಪಾಲಿಕೆಯಲ್ಲಿ ಅತ್ಯವಶ್ಯಕ ಸೇವೆಗಳನ್ನು ಒದಗಿಸಲು ಮಾತ್ರ ಅನುದಾನವನ್ನು ಮೀಸಲಿರಿಸಿ, 2021–22ನೇ ಸಾಲಿನ ಕರಡು ಆಯವ್ಯಯವನ್ನು ತಯಾರಿಸಲಾಗಿದ್ದು, ಅನುದಾನ ಒದಗಿಸಲಾಗಿರುವ ಸ್ವೀಕೃತಿ ಮತ್ತು ಪಾವತಿಗಳ ಪ್ರಮುಖ ಶೀರ್ಷಿಕೆಗಳ ವಿವರಗಳು ಕೆಳಕಂಡಂತಿದೆ;

**<u>2021–22ನೇ ಸಾಲಿನ ಕರಡು ಆಯವ್ಯಯದ ಅಂದಾಜಿಸಿದ ಸ್ವೀಕೃತಿ ವಿವರಗಳು ಕೆಳಕಂಡಂತಿವೆ:</u>**

**1. ಪಾಲಿಕೆಯ ಸ್ವಂತ ಸಂಪನ್ಮೂಲದಿಂದ ಆದಾಯಗಳು :**

(ರೂ.ಕೋಟಿಗಳಲ್ಲಿ)

| ಕ್ರ.ಸಂ. | ವಿವರಗಳು | ಮೊತ್ತ | ಒಟ್ಟು ಮೊತ್ತ |
|---|---|---|---|
| A | **ತೆರಿಗೆ ಆದಾಯ** | | |
| 1 | ಆಸ್ತಿ ತೆರಿಗೆ | 2800.00 | |
| 2 | ಜಾಹೀರಾತು ತೆರಿಗೆ | 52.85 | |
| | **ಒಟ್ಟು ತೆರಿಗೆ ಆದಾಯ** | | **2852.85** |
| B | **ತೆರಿಗೆಯೇತರ ಆದಾಯ** | | |
| 1 | ಆರೋಗ್ಯ ಕರ | 420.00 | |
| 2 | ಘನತ್ಯಾಜ್ಯ ಕರ | 80.00 | |
| 3 | ಅಧಿಭಾರ ಶುಲ್ಕ | 100.00 | |
| 4 | ಪಾಲಿಕೆಯ ಆಸ್ತಿಗಳಿಂದ ಆದಾಯ | 110.47 | |
| 5 | ಅಭಿವೃದ್ಧಿ ಶುಲ್ಕ | 120.00 | |
| 6 | ನಗರ ಯೋಜನೆ ವಿಭಾಗದ ಕಟ್ಟಡ ಪರವಾನಗಿ ಶುಲ್ಕ | 248.30 | |

| | | | |
|---|---|---|---|
| 7 | ವಾಹನ ನಿಲುಗಡೆ ಶುಲ್ಕ | 2.30 | |
| 8 | ವ್ಯಾಪಾರ ಪರವಾನಗಿ ಶುಲ್ಕ | 34.56 | |
| 9 | ಓ ಎಫ್ ಸಿ ಶುಲ್ಕ | 105.00 | |
| 10 | ರಸ್ತೆ ಕತ್ತರಿಸುವ ಮತ್ತು ಸರಿಪಡಿಸುವ ಶುಲ್ಕ | 45.00 | |
| 11 | ತಡವಾಗಿ ಪಾವತಿಸುವ ಆಸ್ತಿ ತೆರಿಗೆ, ಜಾಹೀರಾತು ತೆರಿಗೆ ಮತ್ತು ಬ್ಯಾಂಕ್ ಠೇವಣಿಗಳಿಂದ ಬಡ್ಡಿ | 350.25 | |
| 12 | ಇತರೆ ಶುಲ್ಕ, ಬಳಕೆದಾರರ ಶುಲ್ಕ, ದಂಡ, ಮತ್ತು ಇತರೆ ಆದಾಯ | 135.25 | |
| | **ಒಟ್ಟು ತೆರಿಗೇತರ ಆದಾಯ** | | **1751.13** |
| **C** | **ಭಾರತ ಸರ್ಕಾರದ ಅನುದಾನಗಳು** | | |
| 1 | 15ನೇ ಹಣಕಾಸು ಆಯೋಗದ ಅನುದಾನ | 421.00 | **421.01** |
| 2 | ಲೋಕಸಭಾ ಸದಸ್ಯರ ಸ್ಥಳೀಯ ಪ್ರದೇಶಾಭಿವೃದ್ಧಿ ಅನುದಾನ | 0.01 | |
| | **ಕರ್ನಾಟಕ ಸರ್ಕಾರದ ಅನುದಾನಗಳು** | | **3845.57** |
| 1 | ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ & ಚುನಾವಣೆ ಅನುದಾನ | 0.01 | |
| 2 | ರಾಜ್ಯ ಹಣಕಾಸು ಆಯೋಗ – ಎಸ್‌ಎಫ್‌ಸಿ ಅನುದಾನ (ವೇತನ) | 414.54 | |
| 3 | ರಾಜ್ಯ ಹಣಕಾಸು ಆಯೋಗ–ಎಸ್‌ಎಫ್‌ಸಿ ಅನುದಾನ (ಮುಕ್ತ–ವೇತನೇತರ) | 114.02 | |
| 4 | ರಾಜ್ಯ ಹಣಕಾಸು ಆಯೋಗ–ಎಸ್‌ಎಫ್‌ಸಿ ವಿದ್ಯುತ್ ಶುಲ್ಕ ಪಾವತಿ ಅನುದಾನ | 257.00 | |
| 5 | ಕೋವಿಡ್–19 ಅನುದಾನ | 60.00 | |
| 5 | ವಿಶೇಷ ಮೂಲಭೂತ ಸೌಕರ್ಯ ಯೋಜನೆ ಅನುದಾನ | 3000.00 | |
| | **ಒಟ್ಟು ಸರ್ಕಾರದ ಅನುದಾನ** | | **4266.58** |
| **D** | **ಅಸಾಧಾರಣ ಸ್ವೀಕೃತಿ** | | |
| 1 | ಹಿಂಪಾವತಿಸಬೇಕಾದ ಠೇವಣಿಗಳು | **93.00** | **417.25** |
| 2 | ಗ್ರಂಥಾಲಯ, ಭಿಕ್ಷುಕರ ಕರ ಮತ್ತು ನಗರ ಭೂ ಸಾರಿಗೆ ಕರ | **302.00** | |
| 3 | ಸರ್‌ಛಾರ್ಜ್ | **22.25** | |
| | **ಒಟ್ಟು ಅಸಾಧಾರಣ ಸ್ವೀಕೃತಿ ಮೊತ್ತ** | | |
| | **ಒಟ್ಟು ಮೊತ್ತ** | | **9287.81** |

**2020–21ನೇ ಸಾಲಿನ ಕರಡು ಆಯವ್ಯಯದಲ್ಲಿ ಕೆಳಕಂಡ ವೆಚ್ಚಗಳನ್ನು ಭರಿಸಲು ಅನುದಾನ ಮೀಸಲಿರಿಸಿರುವ ವಿವರಗಳು:**

(ರೂ.ಕೋಟಿಗಳಲ್ಲಿ)

| ಕ್ರ.ಸಂ. | ಅನುದಾನದ ವಿವರಗಳು | ಮೊತ್ತ | ಒಟ್ಟು ಮೊತ್ತ |
|---|---|---|---|
| **A** | **ಆಡಳಿತಾತ್ಮಕ ವೆಚ್ಚಗಳು** | | |
| 1 | ಸಾಮಾನ್ಯ ಆಡಳಿತಾತ್ಮಕ ವೆಚ್ಚಗಳು | 250.37 | 1518.12 |
| 2 | ವೇತನ ಮತ್ತು ಭತ್ಯೆಗಳು | 996.05 | |
| 3 | ನೌಕರರ ನಿವೃತ್ತಿ ಸೌಲಭ್ಯಗಳು | 271.70 | |
| | **ಒಟ್ಟು ಆಡಳಿತಾತ್ಮಕ ವೆಚ್ಚಗಳು** | | |
| **B** | **ಆರ್ಥಿಕ ವೆಚ್ಚಗಳು** | | 296.87 |
| 1 | ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಹಣಕಾಸು ಸಂಸ್ಥೆಯಿಂದ ಪಡೆದ ಸಾಲ ಮತ್ತು ಬಡ್ಡಿ ಮೊತ್ತ ತೀರುವಳಿ | 296.87 | |
| | **ಒಟ್ಟು ಆರ್ಥಿಕ ವೆಚ್ಚಗಳು** | | |
| **C** | **ವಸೂಲಾತಿ ಮತ್ತು ಠೇವಣಿಗಳ ಮರುಪಾವತಿ ಹಾಗೂ ಕರಗಳ ಪಾವತಿ** | 344.25 | 344.25 |
| **D** | **ಇತರೆ ಕಾರ್ಯಕ್ರಮಗಳ ವೆಚ್ಚಗಳು** | | |
| 1 | ಸಾರ್ವಜನಿಕ ಆರೋಗ್ಯ | 184.82 | 1060.89 |
| 2 | ಆರೋಗ್ಯ ವೈದ್ಯಕೀಯ ಕಾರ್ಯಕ್ರಮಗಳು | 69.54 | |
| 3 | ಘನತ್ಯಾಜ್ಯ ನಿರ್ವಹಣೆ | 665.99 | |
| 4 | ಶಿಕ್ಷಣ ಕಾರ್ಯಕ್ರಮಗಳು | 60.54 | |
| 5 | ಇಂದಿರಾ ಕ್ಯಾಂಟೀನ್ | 80.00 | |
| | **ಒಟ್ಟು ಕಾರ್ಯಕ್ರಮಗಳ ವೆಚ್ಚಗಳು** | | |
| **E** | **ಸಮಾಜ ಕಲ್ಯಾಣ ಕಾರ್ಯಕ್ರಮಗಳು** | | |
| 1 | 24.10% ಪರಿಶಿಷ್ಟ ಜಾತಿ/ಪಂಗಡ ಕಲ್ಯಾಣ ಕಾರ್ಯಕ್ರಮಗಳು | 166.63 | 278.54 |
| 2 | ಆರ್ಥಿಕವಾಗಿ ಹಿಂದುಳಿದ ವರ್ಗಗಳ ಕಲ್ಯಾಣ ಕಾರ್ಯಕ್ರಮಗಳು | 37.91 | |
| 3 | ವಿಕಲಚೇತನ ಕಲ್ಯಾಣ ಕಾರ್ಯಕ್ರಮಗಳು | 38.50 | |
| 4 | ಇತರೇ ಕಲ್ಯಾಣ ಕಾರ್ಯಕ್ರಮಗಳು | 35.50 | |
| | **ಒಟ್ಟು ಸಮಾಜ ಕಲ್ಯಾಣ ಕಾರ್ಯಕ್ರಮಗಳು** | | |
| **F** | **ಸಾರ್ವಜನಿಕ ಸೌಲಭ್ಯಗಳ ನಿರ್ವಹಣೆ ಕಾಮಗಾರಿಗಳು** | | |
| 1 | ಉದ್ಯಾನವನ ನಿರ್ವಹಣೆ | 154.27 | 572.80 |
| 2 | ನಗರ ಅರಣ್ಯೀಕರಣ ನಿರ್ವಹಣೆ | 36.54 | |
| 3 | ಬೀದಿ ದೀಪ ನಿರ್ವಹಣೆ | 66.31 | |

| | | | |
|---|---|---|---|
| 4 | ಕುಡಿಯುವ ನೀರು ಕಾಮಗಾರಿಗಳು | 58.68 | |
| 5 | ಬೀದಿ ದೀಪ ವಿದ್ಯುತ್ ಶುಲ್ಕ (ಎಸ್.ಎಫ್.ಸಿ) | 257.00 | |
| | **ಒಟ್ಟು ಸಾರ್ವಜನಿಕ ಸೌಲಭ್ಯಗಳ ನಿರ್ವಹಣೆ ಕಾಮಗಾರಿಗಳು** | | |
| **G** | **ಸಾರ್ವಜನಿಕ ಕಾಮಗಾರಿಗಳು – ನಿರ್ವಹಣೆ ಕಾಮಗಾರಿಗಳು** | | |
| 1 | ಬಾಕಿ ಬಿಲ್ಲುಗಳ ಕಾಮಗಾರಿಗಳು | 107.62 | 822.14 |
| 2 | ಪ್ರಗತಿಯಲ್ಲಿರುವ ಕಾಮಗಾರಿಗಳು | 112.07 | |
| 3 | ಚಾಲ್ತಿ ನಿರ್ವಹಣಾ ಕಾಮಗಾರಿಗಳು | 602.45 | |
| **H** | **ಸಾರ್ವಜನಿಕ ಕಾಮಗಾರಿಗಳು – ಪಾಲಿಕೆ ಅನುದಾನದ ಅಭಿವೃದ್ಧಿ ಕಾಮಗಾರಿಗಳು** | | |
| 1 | ರಸ್ತೆ ಅಗಲೀಕರಣಕ್ಕೆ ಭೂ ಸ್ವಾಧೀನ | 80.00 | 973.17 |
| 2 | ಬಾಕಿ ಬಿಲ್ಲುಗಳ ಕಾಮಗಾರಿಗಳು | 654.73 | |
| 3 | ಪ್ರಗತಿಯಲ್ಲಿರುವ ಕಾಮಗಾರಿಗಳು | 117.94 | |
| 4 | ಚಾಲ್ತಿ ನಿರ್ವಹಣಾ ಕಾಮಗಾರಿಗಳು | 120.50 | |
| **I** | **ಸಾರ್ವಜನಿಕ ಕಾಮಗಾರಿಗಳು – ಸರ್ಕಾರದ ಅನುದಾನದ ಅಭಿವೃದ್ಧಿ ಕಾಮಗಾರಿಗಳು** | | |
| 1 | ಬಾಕಿ ಬಿಲ್ಲುಗಳ ಕಾಮಗಾರಿಗಳು | 912.77 | 3420.02 |
| 2 | ಪ್ರಗತಿಯಲ್ಲಿರುವ ಕಾಮಗಾರಿಗಳು | 2086.07 | |
| 3 | ಚಾಲ್ತಿ ನಿರ್ವಹಣಾ ಕಾಮಗಾರಿಗಳು | 421.18 | |
| | **ಒಟ್ಟು ಅಭಿವೃದ್ಧಿ ಮತ್ತು ನಿರ್ವಹಣೆ ಕಾಮಗಾರಿಗಳು** | | |
| | **ಒಟ್ಟಾರೆ ಅಂದಾಜಿಸಲಾದ ವೆಚ್ಚಗಳು** | | **9286.80** |

## 2021-22ನೇ ಸಾಲಿನ ಕರಡು ಆಯವ್ಯಯದ ಘೋಷ್ವಾರೆ

| ಕ್ರ.ಸ. | ವಿವರಗಳು | **ಮೊತ್ತ (ಕೋಟಿಗಳಲ್ಲಿ)** |
|---|---|---|
| 1 | **ಪ್ರಾರಂಭಿಕ ಶಿಲ್ಕು** | **3.52** |
| 2 | **ಸ್ವೀಕೃತಿಗಳು** | |
| | ತೆರಿಗೆ ಆದಾಯ | 2852.85 |
| | ತೆರಿಗೆಯೇತರ ಆದಾಯ | 1751.13 |
| | ಕೇಂದ್ರ ಸರ್ಕಾರದ ಅನುದಾನ | 421.01 |
| | ರಾಜ್ಯ ಸರ್ಕಾರದ ಅನುದಾನ | 3845.57 |
| | ಅಸಾಧಾರಣ ಸ್ವೀಕೃತಿಗಳು | 417.25 |
| | **ಒಟ್ಟು ಸ್ವೀಕೃತಿಗಳು** | **9287.81** |

| | | |
|---|---|---|
| 3 | **ವೆಚ್ಚಗಳು** | |
| | ಆಡಳಿತಾತ್ಮಕ ವೆಚ್ಚಗಳು | 1518.12 |
| | ಆರ್ಥಿಕ ವೆಚ್ಚಗಳು | 296.87 |
| | ವಸೂಲಾತಿ ಮತ್ತು ಠೇವಣಿಗಳ ಮರುಪಾವತಿ ಹಾಗೂ ಕರಗಳ ಪಾವತಿ | 344.25 |
| | ಸಾರ್ವಜನಿಕ ಆರೋಗ್ಯ, ವೈದ್ಯಕೀಯ, ಶಿಕ್ಷಣ ಮತ್ತು ಘನತ್ಯಾಜ್ಯ ನಿರ್ವಹಣೆ ಕಾರ್ಯಕ್ರಮಗಳು | 1060.89 |
| | ಸಮಾಜ ಕಲ್ಯಾಣ ಕಾರ್ಯಕ್ರಮಗಳು | 278.54 |
| | ಸಾರ್ವಜನಿಕ ಸೌಲಭ್ಯಗಳ ನಿರ್ವಹಣೆ ಕಾಮಗಾರಿಗಳು | 572.80 |
| | ಸಾರ್ವಜನಿಕ ಕಾಮಗಾರಿಗಳು – ನಿರ್ವಹಣೆ ಕಾಮಗಾರಿಗಳು | 822.14 |
| | ಸಾರ್ವಜನಿಕ ಕಾಮಗಾರಿಗಳು – ಪಾಲಿಕೆ ಅನುದಾನದ ಅಭಿವೃದ್ಧಿ ಕಾಮಗಾರಿಗಳು | 973.17 |
| | ಸಾರ್ವಜನಿಕ ಕಾಮಗಾರಿಗಳು – ಸರ್ಕಾರದ ಅನುದಾನದ ಅಭಿವೃದ್ಧಿ ಕಾಮಗಾರಿಗಳು | 3420.02 |
| | **ಒಟ್ಟು ವೆಚ್ಚಗಳು** | **9286.80** |
| 4 | **ಅಂತಿಮ ಶಿಲ್ಕು** | **4.53** |

ಪಾಲಿಕೆಯ ಆರ್ಥಿಕ ಸಂಪನ್ಮೂಲಗಳ ಮಿತಿ ಮತ್ತು ಪ್ರಸ್ತುತ ಪಾಲಿಕೆಯ ಆರ್ಥಿಕ ಪರಿಸ್ಥಿತಿಯನ್ನು ಪರಿಗಣಿಸಿ, ತಯಾರಿಸಲಾದ 2020–21ನೇ ಸಾಲಿನ ಪರಿಷ್ಕೃತ ಆಯವ್ಯಯ ಮತ್ತು 2021–22 ನೇ ಸಾಲಿನ ಕರಡು ಆಯವ್ಯಯವನ್ನು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮತ್ತು ಕೌನ್ಸಿಲ್ ಸಭೆಯ ಅನುಮೋದನೆಗಾಗಿ ಟಿಪ್ಪಣಿಯನ್ನು ಮಂಡಿಸಿದೆ.

ಮುಂದುವರೆದು, ನಿಯಮಾನುಸಾರ ಕರಡು ಆಯವ್ಯಯವನ್ನು ಸರ್ಕಾರಕ್ಕೆ ಕಳುಹಿಸಿ ಅನುಮೋದನೆ ಪಡೆಯಬೇಕಾಗಿರುವ ಪ್ರಯುಕ್ತ ಸರ್ಕಾರದ ಅನುಮೋದನೆಯನ್ನು ಕಾಯ್ದಿರಿಸಿ, ಪಾಲಿಕೆಯ ಅವಶ್ಯಕ ವೆಚ್ಚಗಳಾದ ವೇತನ, ಪಿಂಚಣಿ, ನಿರ್ವಹಣೆ ಮತ್ತು ಕಾಮಗಾರಿ ಬಾಕಿ ಬಿಲ್ಲು ಹಾಗೂ ಇತರೆ ಅವಶ್ಯಕ ಬಿಲ್ಲುಗಳ ಪಾವತಿಗೆ ಒಟ್ಟಾರೆ ಆಯವ್ಯಯದ ಶೇಕಡ 30 ರಷ್ಟು ಅನುದಾನದ ವೆಚ್ಚವನ್ನು ಭರಿಸುವ ಸಂಬಂಧ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮತ್ತು ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ಸೂಕ್ತ ತೀರ್ಮಾನಕ್ಕಾಗಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:25–03–2021 ರ ಟಿಪ್ಪಣಿ.

**ತೀರ್ಮಾನ: ಆಯುಕ್ತರವರ ದಿನಾಂಕ:25–03–2021 ರ ಟಿಪ್ಪಣಿಯನ್ನು ಒಪ್ಪಿದೆ.**

**(ಗೌರವ ಗುಪ್ತ)**
**ಆಡಳಿತಗಾರರು**